ಶ್ರೀ ಟಿ.ಆರ್. ಶಾಮಣ್ಣ.—ಎಕಾನಮಿ ಆರ್ಡರ್‌ನಿಂದ ಎಷ್ಟರಮಟ್ಟಿಗೆ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ?

ಶ್ರೀ ಎಂ. ವೈ. ಘೋರ್ಪಡೆ.—ಇದು ಈ ವರ್ಷಕ್ಕೆ ಸಂಬಂಧಪಟ್ಟ ಪ್ರಶ್ನೆ ಎಂದು ನಾನು ತಿಳಿದು ಕೊಂಡಿದ್ದೇನೆ. ಎಕಾನಮಿ ಆರ್ಡರ್ಸ್ ಜಾರಿಯಲ್ಲಿದೆ. ಇದರಿಂದ ನಾನ್ ಪ್ಲಾನ್‌ನಲ್ಲಿ ೧೫ಕೋಟಿ ರೂಪಾಯಿ ಮಾಡಿದ್ದೇವೆ ಎಂದು ನಾನು ಪದೇ ಪದೇ ಈ ಸಭೆಗೆ ತಿಳಿಸಿದ್ದೇನೆ. ಈಗ ಹೋದ ವರ್ಷದ ಸಂಬಳ ಎಲ್ಲವೂ ನಾನ್ ಪ್ಲಾನ್‌ನಲ್ಲಿ ಬರುತ್ತದೆ. ಳನೇ ಪಂಚವಾರ್ಷಿಕ ಯೋಜನೆಯ ಕೊನೇ ವರ್ಷದಲ್ಲಿ ಇರತಕ್ಕಂಥ ಸಂಬಳಗಳು ಎಲ್ಲ ನಾನ್ ಪ್ಲಾನ್‌ನಲ್ಲಿ ಬರುತ್ತದೆ. ಅದಕಾರಣ, ನಾನ್ ಪ್ಲಾನ್‌ನಲ್ಲಿ ಬರೀ ಸಂಬಳ ಅಲ್ಲ, ಬೇರೆ ರೀತಿಯೂ ಇದೆ, ಇದರಲ್ಲಿ ೧೫ಕೋಟಿ ರೂಪಾಯಿ ಕಡಿಮೆ ಮಾಡಬೇಕು ಎಂದು ಮಾಡಿದ್ದೇವೆ. ಯಾವ ಯಾವ ಡಿಪಾರ್ಟ್‌ಮೆಂಟ್ಸ್‌ನಲ್ಲಿ ಎಷ್ಟೆಷ್ಟು ವೆಕನ್ಸಿ ಇದೆ, ಯಾವ ಯಾವ ವೆಕನ್ಸಿಯನ್ನು ಭರ್ತಿ ಮಾಡದೇ ಇದ್ದರೆ ಅಪಾಯವಾಗುವುದಿಲ್ಲ ಎನ್ನುವ ವಿಷಯದಲ್ಲಿ ಡಿಪಾರ್ಟ್‌ಮೆಂಟ್ ನವರು ವಿವರಗಳನೆಲ್ಲಾ ವಿಚಾರ ಮಾಡಿದ್ದಾರೆ ಅವರ ಹೇಳಿಕೆ ಪ್ರಕಾರ, ಅನ್ ಎಸೆನ್‌ಷಿಯಲ್ ವೆಕೆನ್ಸಿಗಳನ್ನು ಭರ್ತಿಮಾಡುವುದನ್ನು ಪೋಸ್ಟ್‌ಪೋನ್ ಮಾಡಬೇಕು ಎಂದು ಮಾಡಿದೆ ಅದೂ ಕೂಡ ೧೫ಕೋಟಿ ರೂಪಾಯಿಯಲ್ಲಿ ಸೇರಿದೆ. ಅಂದರೆ ಎಸೆನ್‌ಷಿಯಲ್ ಆಕ್ಟಿವಿಟೀಸ್ ಎಂದರೆ ಎಜುಕೇಷನ್ ಮೆಡಿಕಲ್ ಮುಂತಾದ ಡಿಪಾರ್ಟ್‌ಮೆಂಟ್‌ಗಳಲ್ಲಿ ಎಸೆನ್‌ಷಿಯಲ್ ವೆಕೆನ್ಸಿಯನ್ನು ಭರ್ತಿ ಮಾಡಬಾರದು ಎಂದು ಹೇಳಲಿಲ್ಲ, ಷಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಮಾಡಿದ್ದೇವೆ. ಇಲ್ಲದೆ ಇದ್ದರೆ ಎಸೆನ್‌ಷಿಯಲ್ ಆಕ್ಟಿವಿಟಿ ನಿಂತುಹೋಗುತ್ತದೆ.

* Repairs of Primary School Buildings

303 SRI ANDANAIAH (Knnigal)—

Will the Minister of State for Primary and Secondary Education be pleased to state.

(a) the amount earmarked for repairs of primary school buildings for the years 1973-74 and 1974-75 in the state.

(b) whether the amount has been released.

(c) if not, the reason for the same ?

SMT. E.E. VAZ.—Minister of State for Primary and Secondary Education.

a)	1973-74	1974-75
	Rs. 30,00,000	Rs. 35,00,000
b)	Yes	Yes

c) Does not arise in view of reply to (b) above.

ಶ್ರೀ ಆಂದಾನಯ್ಯ.—ಸ್ವಾಮಿ, ತಮ್ಮ ಉತ್ತರದಲ್ಲಿ ೧೯೭೪—೭೫ನೇ ಇಸವಿಯಲ್ಲಿ ೩೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಈ ಹಣವನ್ನು ಯಾವ ತಿಂಗಳಲ್ಲಿ ಬಿಡುಗಡೆ ಮಾಡಿದ್ದೀರಿ ? ಮತ್ತು ಈ ಮೊತ್ತ ತಾಲ್ಲೂಕ್ ಬೋರ್ಡುಗಳ ಕೈ ಸೇರಿದೆಯೇ ?

ಶ್ರೀಮತಿ ಇ.ಇ. ವಾಜ್.—೧೯೭೪—೭೫ರಲ್ಲಿ ಅಂದರೆ ೨೫ ಜುಲೈ ೧೯೭೪ಕ್ಕೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸಮರ್ಪಕವಾಗಿ ಈ ಮೊಬಲಗಳನ್ನು ಹಂಚಲಾಗಿದೆ. ಡೆಪ್ಯುಟಿ ಕಮಿಷನರ್‌ರವರು ತಾಲ್ಲೂಕ್ ಬೋರ್ಡ್‌ನವರಿಗೆ ಕೊಟ್ಟು ಅವರಿಂದ ದುರಸ್ತಿ ಕೆಲಸಗಳನ್ನು ಮಾಡಿಸಿದ್ದಾರೆ.

ಶ್ರೀ ಆಂದಾನಯ್ಯ.—೧೯೭೩—೭೪ರಲ್ಲಿ ೩೦ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಈ ೩೦ಲಕ್ಷ ರೂಪಾಯಿಗಳನ್ನು ಪೂರ್ತಿಯಾಗಿ ರಿಪೇರಿ ಕೆಲಸಕ್ಕೆ ಉಪಯೋಗಿಸಿದ್ದಾರೆಯೇ ಅಥವಾ ಲ್ಯಾಪ್ಸ್ ಆಗಿದೆಯೇ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀಮತಿ ಇ.ಇ. ವಾಜ್.—೧೯೭೩—೭೪ರಲ್ಲಿ ೩೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೂ ಆದರಲ್ಲಿ ೧೬೦೨.೩೩೧ ರೂಪಾಯಿಗಳನ್ನು ಉಪಯೋಗಿಸಲಾಗಿದೆ. ಮತ್ತು ಎಕನಾಮಿ ಆರ್ಡರ್ ಬಂದಿದ್ದರಿಂದ ೧೩೯೭,೬೬೮ರೂಪಾಯಿಗಳನ್ನು ಅವರು ವಾಪಸ್ಸು ಕೊಡಬೇಕಾಯಿತು.

ಶ್ರೀ ಅಂದಾನಯ್ಯ —ರಿಪೇರಿ ಕೆಲಸಕ್ಕೆ ಹಣವನ್ನು ಬಿಡುಗಡೆ ಮಾಡಿದ ರೂ ಆದನ್ನು ಸಕಾಲದಲ್ಲಿ ಬಿಡುಗಡೆ ಮಾಡದೇ ಇದ್ದುದರಿಂದ ಲ್ಯಾಪ್ಸ್ ಆಗುವುದಕ್ಕೆ ಕಾರಣವಲ್ಲವೆ ? ಇದಕ್ಕೆ ಸರ್ಕಾರ ಜವಾಬ್ದಾರಿಯಲ್ಲವೇ ?

ಶ್ರೀಮತಿ ಇ.ಇ. ವಾಜ್.—ಸರ್ಕಾರ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಿದೆ. ಆದರೆ ಬಿಡುಗಡೆ ಮಾಡಿದ ತಕ್ಷಣ ಎಕಾನಮಿ ಆರ್ಡರ್ ಬಂದಿದ್ದರಿಂದ ಜಿಲ್ಲಾಧಿಕಾರಿಗಳು ವಾಪಸ್ ಕೊಡಬೇಕಾಯಿತು.

ಶ್ರೀ ಕೆ.ಹೆಚ್. ಹನುಮೇಗೌಡ.—ಸರ್ಕಾರ ಜಿಲ್ಲಾಧಿಕಾರಿಗಳಿಗೆ ಹಣವನ್ನು ಕೊಡುತ್ತದೆ, ಜಿಲ್ಲಾಧಿಕಾರಿಗಳು ತಾಲೂಕ್ ಬೋರ್ಡ್‌ಗಳಿಗೆ ಹಂಚುತ್ತಾರೆ ಎಂದು ಹೇಳಿದಿರಿ. ಜಿಲ್ಲಾಧಿಕಾರಿಗಳು ಯಾವ ನಿಬಂಧನೆಗಳನುಸರಿಸಿ ಹಂಚುತ್ತಾರೆ? ಏಕೆಂದರೆ ಕೆಲವು ತಾಲ್ಲೂಕುಗಳಲ್ಲಿ ಹೆಚ್ಚಿಗೆ ಪಾಠಶಾಲೆಗಳು ಇರುತ್ತವೆ ಕೆಲವು ತಾಲ್ಲೂಕುಗಳಲ್ಲಿ ಸ್ಪೆಷಲ್ ರಿಪೇರ್ಸ್ ಇರುತ್ತವೆ. ಆದುದರಿಂದ ಜಿಲ್ಲಾಧಿಕಾರಿಗಳು ಯಾವ ನಿಬಂಧನೆಯನ್ನನುಸರಿಸಿ ದುಡ್ಡನ್ನು ಹಂಚುತ್ತಾರೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀಮತಿ ಇ.ಇ. ವಾಜ್.—ಸಮರ್ಪಕವಾಗಿ ಹಣವನ್ನು ಹಂಚಲಾಗಿದೆ ಎನ್ನುವುದನ್ನು ನಾನು ಆಗಲೇ ಹೇಳಿವ್ವೇನೆ. ಎಷ್ಟು ದುರಸ್ತಿ ಇವೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಹಂಚಲಾಗಿದೆ. ಅರ್ಜಂಟ್ ರಿಪೇರಿ ಮಾಡುವುದಕ್ಕೋಸ್ಕರ ೫ ಲಕ್ಷ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದ್ದೇವೆ.

ಶ್ರೀ ಕೊಣಂದೂರು ಲಿಂಗಪ್ಪ.—ಎಕಾನಮಿ ಆರ್ಡರ್ ಬಂದಿದ್ದರಿಂದ ಎಲ್ಲಾ ಪ್ರಾಥಮಿಕ ಶಾಲೆಗಳ ದುರಸ್ತಿಗೆ ತೊಂದರೆಯಾಗಿದೆಯೆಂದು ಹೇಳಿದ್ದೀರಿ. ಸ್ವಾಗತಾರ್ಹ ಅಧಿಕಾರಿ, ಷಂತಾದ ಹೊಸ ಹುದ್ದೆಗಳನ್ನು ಸೃಷ್ಟಮಾಡುವುದಕ್ಕೆ ಎಕಾನಮಿ ಆರ್ಡರ್ ಅನ್ವಯ ಆಗುವುದಿಲ್ಲವೇ? ಆದುದರಿಂದ ಸರ್ಕಾರದ ವತಿಯಿಂದ ಎಕಾನಮಿ ಆರ್ಡರ್ ಅಂದರೆ ಡಿಫರ್‌ನೀಷನ್ ಏನು ಎಂದು ಉತ್ತರ ಬೇಕಾಗಿದೆ.

ಅಧ್ಯಕ್ಷರು.—ಫೈನಾನ್ಸ್ ಮಿನಿಸ್ಟರ್‌ಗೆ ಒಂದು ಪ್ರಶ್ನೆ ಕೇಳುಹಿಸಿ.

ಶ್ರೀ ಕೆ.ಆರ್. ಶ್ರೀನಿವಾಸಲು ನಾಯ್ಡು —ಉದಾಹರಣೆಗೆ ಹೇಳುವುದಾದರೆ, ಅಶೋಕ ನಗರದಲ್ಲಿ ತೆಲುಗು ಬಾಯ್ಸ್ ಪ್ರೈಮರಿ ಸ್ಕೂಲ್ ಮತ್ತು ಶಾಂತಿನಗರದಲ್ಲಿ ಪ್ರೈಮರಿ ಸ್ಕೂಲ್‌ಗಳಲ್ಲಿ ಸೂರ್ಯನ ಕಿರಣ ಒಳಗೆ ಬರುತ್ತದೆ ಮಕ್ಕಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಲ್ಯಾವೆಟರಿ ಇಲ್ಲ ಹೀಗಿರುವುದಕ್ಕೆ ಕಾರಣವೇನು ? ಇದರ ಬಗ್ಗೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀಮತಿ ಇ.ಇ. ವಾಜ್.—ಪ್ರತಿಯೊಂದು ಶಾಲೆಯನ್ನೂ ಅಷ್ಟು ಸೂಕ್ಷ್ಮವಾಗಿ ನೋಡಿರುವುದಕ್ಕೆ ಅವಕಾಶ ಇರುವುದಿಲ್ಲ. ಸೂರ್ಯನ ಕಿರಣಗಳು ಒಳಗೆ ಬರುತ್ತದೆ ಎಂದು ಹೇಳಿದ್ದಾರೆ. ಮತ್ತು ಯಾವ ಯಾವ ತೊಂದರೆಗಳಿವೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದರೆ, ಅದು ದುರಸ್ತಿಗೆ ಬರುವುದಾದರೆ ಅದನ್ನು ನೋಡಿಕೊಳ್ಳುತ್ತೇವೆ.

SRI B.B. SAYANAK.—Has it not come to the notice of the Government that 12 Primary schools in Belgaum had been closed from 16th to 31st July due to repair work.

SMT. E.E VAZ.—It has not come to our notice. But I shall look into it.

ಶ್ರೀ ಅಂದಾನಯ್ಯ,—ಹೆಚ್ಚು ಸ್ಕೂಲು ಕಟ್ಟಡಗಳು ರಿಪೇರಿ ಆಗದೇ ಶಿಥಿಲವಾಗಿ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಮೊತ್ತ ನಿಗದಿ ಮಾಡಿದ್ದೀರಿ. ಈ ಮೊತ್ತವನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಇ.ಇ. ವಾಜ್.—ಸಾಧ್ಯವಾದಷ್ಟು ಪ್ರಯತ್ನ ಮಾಡೋಣ.